### ಲಕ್ಷ್ಯ ಸೇನ್: ಚಿನ್ನದ ಹೂ

‘ಲಕ್ಷ್ಯ ಸೇನ್: ಚಿನ್ನದ ಹೂ’ (ಪ್ರಮೋದ್, ಫೆ. 3) ಲೇಖನ ಚೆನ್ನಾಗಿದೆ. ಒಬ್ಬ ಕ್ರೀಡಾಪಟು ಹಂತಹಂತವಾಗಿ ರೂಪಿತಗೊಳ್ಳುವ ವಿವರಗಳು ತುಂಬ ಆಸಕ್ತಿದಾಯಕವೆನಿಸಿದವು. ಚಿನ್ನವಾಗುವ ಮೊದಲು ಕುಲುಮೆಯಲ್ಲಿ ಮೈಸುಟ್ಟುಕೊಳ್ಳಲೇಬೇಕಲ್ಲವೇ?

—ಅಮ್ಮಕ್ಕ ಪಟಗಾರ್, ಕುಮಟಾ

### ಮಕ್ಕಳ ಹಕ್ಕುಗಳು

‘ಮಕ್ಕಳ ಹಕ್ಕುಗಳಿಗೆ ದೊಡ್ಡವರೇ ಶ್ರಮಿಸಬೇಕು’ (ಸ್ವಯಂಪ್ರಭಾ, ಫೆ.3) ಬರಹ ತುಂಬ ಅರ್ಥಗರ್ಭಿತವಾಗಿದೆ. ಮಕ್ಕಳ ಮನೋವಿಕಾಸದ ಮೇಲೆ ಬೆಳಕು ಚೆಲ್ಲುವ ಹಾಗಿದೆ. ಲೇಖಕರ ಪರಿಕಲ್ಪನೆ ನಿಜವಾಗಿಯೂ ಶ್ಲಾಘನೀಯವಾಗಿದ್ದು, ಎಳೆ ಮಕ್ಕಳ ಹಾಗೂ ಪೋಷಕರ ಭಾವನಾತ್ಮಕ ಸಂಬಂಧದಲ್ಲಿ ಪಾಲಕರ ಹೊಣೆಗಾರಿಕೆಯನ್ನು ಪ್ರತಿಬಿಂಬಿಸುವ ಹಾಗಿದೆ.

—ಎಸ್.ವಿ. ನಾಯಕ ರಾಣೆ, ಧಾರವಾಡ

ಮಕ್ಕಳ ಹಕ್ಕುಗಳ ಕುರಿತು ಅರಿವು ಮೂಡಿಸುವ ಲೇಖನ ತುಂಬ ಚೆನ್ನಾಗಿ ಮೂಡಿಬಂದಿದೆ. ಈಗಿನ ಅಪ್ಪ–ಅಮ್ಮಂದಿರಿಗೆ ಮಾರ್ಗದರ್ಶಿಯಾಗಿದೆ.

—ಬಾಲರಾಜ್

### ಬಂಡಿಪುರ ಹೊಸ ಫಾಂಟ್

ಫೆ. 3ರ ಸುಧಾ ಸಂಚಿಕೆಯಲ್ಲಿ, ಮುಖಪುಟದಲ್ಲಿ, ಒಳಪುಟದ ಕೆಲವು ಲೇಖನಗಳಲ್ಲಿ ಕನ್ನಡದ ಹೊಸ ಬೆರಳಚ್ಚು ನೋಡಿ ಖುಷಿ ಆಯ್ತು. ‘ಬಂಡಿಪುರ’ ಅನ್ನುವ ಹೊಸ ಬೆರಳಚ್ಚು ಬಿಡುಗಡೆಯಾದ ಸುದ್ದಿ ಓದಿದ್ದೆ. ‘ಸುಧಾ’ಇಂತಹ ಹೊಸ ಪ್ರಯತ್ನಗಳಿಗೆ, ಕನ್ನಡ ಬೆಳೆಯಲು ಬೆನ್ನೆಲುಬಾಗಿ ನಿಲ್ಲುತ್ತಿರುವುದು ಖುಷಿಯ ಸಂಗತಿ. ಇಡೀ ತಂಡಕ್ಕೆ ಅಭಿನಂದನೆಗಳು

—ರಾಘು ತೆಗ್ಗಿಹಾಳ

### ಕಲಾವಿದರ ಹೆಸರೆಲ್ಲಿ?

‘ಚಾಕ್‌ನಲ್ಲಿ ಕಲಾಕೃತಿ’ (ಜೀವನ್ ಶೆಟ್ಟಿ, ಜ. 27) ಎಂಬ ಶೀರ್ಷಿಕೆಯಲ್ಲಿ ‘ನಿಮ್ಮ ಪುಟ’ದಲ್ಲಿ ಪ್ರಕಟವಾದ ಬರಹ ಚೆನ್ನಾಗಿದೆ. ಸುಣ್ಣದ ಬಳಪವನ್ನು ಪಿನ್ ಕಟ್ಟರ್ ಬ್ಲೇಡ್ ಮಾತ್ರ ಬಳಸಿ ಕೆತ್ತಿದ ಉಡುಪಿಯ ಶ್ರೀಕೃಷ್ಣ ಮತ್ತು ವಿಶ್ವೇಶತೀರ್ಥ ಸ್ವಾಮೀಜಿಯವರ ತ್ರೀಡಿ ಶಿಲ್ಪ ಕಲಾಕೃತಿ ಸುಂದರವಾಗಿದೆ. ಆದರೆ ಆ ಅದ್ಭುತ ಪ್ರತಿಭೆಯ ಕಲಾವಿದ ಯಾರೆಂದು ಈ ಲೇಖನದಲ್ಲಿ ಕಾಣುತ್ತಿಲ್ಲವಲ್ಲ, ಕಾಣಿಸಬೇಕಿತ್ತು.ಆಗ ಶಿಲ್ಪಕ್ಕೆ ಎಷ್ಟು ನ್ಯಾಯ ಸಿಗುವುದೋ ಅಷ್ಟೇ ಆ ಅನಾಮಿಕ ಕಲಾವಿದರಿಗೂ ಲಭಿಸುತ್ತಿತ್ತು.

—ಧನಂಜಯ, ಮೂಡುಬಿದಿರೆ

## ಪುನಃ ಪುನಃ

‘ಪುನಃ ಪುನಃ’ (ನಳಿನಿ ಟಿ. ಭೀಮಪ್ಪ, ಫೆ. 3) ಬರಹ ನಿಜಕ್ಕೂ ಮಂದಹಾಸ ಅರಳಿಸುವಂತಿತ್ತು. ನಿತ್ಯ ಬಳಸುವ ಭೌತಿಕ ವಸ್ತುಗಳಿಂದ ಹಿಡಿದು ಬೌದ್ಧಿಕ ಲೇಖನಗಳವರೆಗೂ ಬಂದಿರುವ ಪುನರ್ಬಳಕೆ ವಿಷಯಗಳು ಚೆನ್ನಾಗಿವೆ. ಶೇ. 80ರಷ್ಟು ಜನರ ನೈಜ ಬದುಕಿನ ಘಟನೆಗಳಿವು.

—ಸುಶೀಲಾ ಸೋಮಶೇಖರ್, ಹಾಸನ



ಲೇಖಕರು ನಮ್ಮ ದಿನನಿತ್ಯದ ಬದುಕಿನ ಸಂಗತಿಗಳನ್ನೇ ಇಟ್ಟುಕೊಂಡು ಲಘುವಾಗಿ ನಿರೂಪಿಸಿದ್ದಾರೆ. ಅವರ ಬರಹ ಓದಿದ ಮೇಲೆ ನನ್ನ ದಿನನಿತ್ಯದ ಚಟುವಟಿಕೆಗಳನ್ನೇ ಮತ್ತೊಮ್ಮೆ ನೋಡಿಕೊಳ್ಳುವಂತಾಯ್ತು. ನಾವೆಲ್ಲರೂ ಪುನರ್‌ಬಳಕೆಯನ್ನು ಪ್ರತಿದಿನ ಎಷ್ಟು ಸಹಜವಾಗಿ ಮಾಡುತ್ತಿರುತ್ತೇವಲ್ಲವೇ?

—ಕೃಷ್ಣ ಸಿದ್ದಿ, ಮಂಚಿಕೇರಿ

## ಸ್ವಾಭಿಮಾನಿ ಪುಸ್ತಕ ಪ್ರಶಸ್ತಿಗೆ ಆಹ್ವಾನ

ಸ್ವಾಭಿಮಾನಿ ಕರ್ನಾಟಕ ವೇದಿಕೆಯು ಪ್ರಶಸ್ತಿಗೆ ಕೃತಿಗಳನ್ನು ಆಹ್ವಾನಿಸಿದೆ. 2021ರಲ್ಲಿ ಪ್ರಕಟವಾದ ಸಾಹಿತ್ಯದ ಯಾವುದೇ ಪ್ರಕಾರದ ಕೃತಿಗಳನ್ನೂ ಕಳಿಸಬಹುದು. ಆಯ್ಕೆಯಾದ 5 ಪ್ರಕಾರದ 5 ಕೃತಿಗಳಿಗೆ ₹5000 ಬಹುಮಾನವಿರುತ್ತದೆ. ಪ್ರಕಟಿತ ಕೃತಿಗಳ ಮೂರು ಪ್ರತಿಗಳನ್ನು ಮಾರ್ಚ್ 15ರ ಒಳಗಾಗಿ ಕಳಿಸಿಕೊಡಬೇಕು. ವಿಳಾಸ: ದ್ವಾರನಕುಂಟೆ ಪಾತಣ್ಣ, ಸ್ವಾಭಿಮಾನಿ ಕರ್ನಾಟಕ ವೇದಿಕೆ, #118, ಹೊಂಬೆಳಕು, 5ನೇ ಅಡ್ಡರಸ್ತೆ, 1ನೇ ಬ್ಲಾಕ್, ಎಚ್.ಎಂ.ಟಿ. ಲೇಔಟ್, ನಾಗಸಂದ್ರ ಅಂಚೆ, ಬೆಂಗಳೂರು–560073

ದೂರವಾಣಿ: 9686073837

## ಪ್ರಜ್ಞೆ - ಪರಿಸರ ಮತ್ತು ತ್ರಿಶಂಕು ಸ್ವರ್ಗ

‘ಪ್ರಜ್ಞೆ – ಪರಿಸರ ಮತ್ತು ತ್ರಿಶಂಕು ಸ್ವರ್ಗ’ (ರಾಜಲಕ್ಷ್ಮಿ ಕೋಡಿಬೆಟ್ಟು, ಫೆ. 3) ಲೇಖನ ತುಂಬಾ ಮಾಹಿತಿಪೂರ್ಣವಾಗಿದೆ. ಅಭಿವೃದ್ಧಿಯ ಹೆಸರಿನಲ್ಲಿ ಕಾಡನ್ನು ನಾಶಮಾಡುವ ಮತ್ತು ಕಾಡನ್ನು ರಕ್ಷಿಸುವುದಕ್ಕೆ ಹಲವು ವಿಧಗಳಲ್ಲಿ ಅಡ್ಡಗಾಲಾಗಿರುವವರಿಂದ ಅಪಾಯವಿರುವುದು ನಮ್ಮ ಮುಂದಿನ ಪೀಳಿಗೆಗೆ. ಈ ಮೂಲಕ ನಾವು ಕುಳಿತಿರುವ ಕೊಂಬೆಯನ್ನು ನಾವೇ ಕಡಿಯುತ್ತಿದ್ದೇವೆ ಎಂಬುದರ ಪ್ರಜ್ಞೆಯೂ ಯಾರಿಗೂ ಇದ್ದಂತಿಲ್ಲ.

—ಪೂರ್ಣಾ ಬೊಂಗಡೆ, ಸಕಲೇಶಪುರ

ಗಾಡ್ಗೀಳ್ ವರದಿ ಮತ್ತು ಕಸ್ತೂರಿ ರಂಗನ್ ವರದಿಗಳ ಅಂತಿಮ ಉದ್ದೇಶ ಪಶ್ಚಿಮ ಘಟ್ಟಗಳನ್ನು ರಕ್ಷಿಸುವುದೇ ಅಲ್ಲವೇ? ಆ ನಿಟ್ಟಿನಲ್ಲಿ ನಾವು ಒಂದಾದರೂ ಹೆಜ್ಜೆ ಇಟ್ಟಿದ್ದೇವೆಯೇ? ಸರ್ಕಾರ ದೂರದೃಷ್ಟಿ ಇಟ್ಟುಕೊಂಡು ಕಠಿಣ ನಿರ್ಧಾರ ಕೈಗೊಳ್ಳದಿದ್ದರೆ ಮುಂದಿನ ಪೀಳಿಗೆಯವರ ಕಣ್ಣಲ್ಲಿ ನಾವು ಖಳರಾಗುತ್ತೇವಷ್ಟೆ.

—ರೋಸಿ ಜೋಸೆಫ್, ಕಾರವಾರ



ಪಶ್ಚಿಮ ಘಟ್ಟಗಳ ಮಡಿಲಲ್ಲಿ ಮೊದಲಿನಿಂದ ವಾಸಿಸುತ್ತ ಬಂದವರನ್ನು ಈಗ ಪರಿಸರ ರಕ್ಷಣೆಯ ಹೆಸರಿನಲ್ಲಿ ಒಕ್ಕಲೆಬ್ಬಿಸುವುದು ಖಂಡಿತ ಸಮಂಜಸವಲ್ಲ. ಇಂದು ಪರಿಸರ ದೊಡ್ಡ ಪ್ರಮಾಣದಲ್ಲಿ ಮಲಿನಗೊಳ್ಳುತ್ತಿರುವುದರು ಅಲ್ಲಿಯೇ ಇದ್ದವರಿಂದಲ್ಲ, ಹೊರಗಿನಿಂದ ಬಂದು ಪಶ್ಚಿಮಘಟ್ಟಗಳ ಮಡಿಲಲ್ಲಿ ಹಣ ಚೆಲ್ಲಿ ದಂಧೆ ಮಾಡುತ್ತಿರುವವರಿಂದ. ಹಾಗೆ ನೋಡಿದರೆ ಪಶ್ಚಿಮಘಟ್ಟಗಳ ಮೂಲನಿವಾಸಿಗಳಿಗೆ ಪರಿಸರ ಜಾಗೃತಿ ಮೂಡಿಸಿದರೆ ಅವರನ್ನು ಪರಿಸರ ರಕ್ಷಣೆಯ ಕಾಲಾಳುಗಳನ್ನಾಗಿ ಬಳಸಿಕೊಳ್ಳಬಹುದು.

—ನರಸಿಂಹಮೂರ್ತಿ ಪಿ.ಎಲ್., ಕೊಡಚಾದ್ರಿ

ಪರಿಸರವನ್ನು ಹತ್ಯೆ ಮಾಡಲು ಇಂದು ಹಲವಾರು ಯೋಜನೆಗಳು ತುದಿಗಾಲಿನಲ್ಲಿ ನಿಂತಿವೆ. ಮೇಕೆದಾಟು ಯೋಜನೆಯಿಂದಲೂ ಅಪಾರ ಪರಿಸರನಾಶ ಆಗಲಿದೆ. ಇತ್ತೀಚೆಗಿನ ಕೇಂದ್ರ ಬಜೆಟ್‌ನಲ್ಲಿ ಘೋಷಣೆಯಾಗಿರುವ ಐದು ನದಿಗಳ ಜೋಡಣೆ ಕಾರ್ಯವೂ ಪರಿಸರ ಏರುಪೇರಿಗೆ ಮೂಲವಾಗಲಿದೆ. ಸಹಜವಾಗಿದ್ದ ನಿಸರ್ಗವನ್ನು ತನ್ನ ಸ್ವಾರ್ಥಕ್ಕಾಗಿ ವಿಕಾರಗೊಳಿಸುವ ಮನುಷ್ಯನ ದುರಾಸೆ ಅವನನ್ನು ಪಾತಾಳಕ್ಕೆ ನೂಕಲಿದೆ.

—ವರ್ಷಾ ಹೆಗಡೆ, ಯಲ್ಲಾಪುರ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in